ಇ) ರಸ್ತೆ ದುರಸ್ಥಿಗೊಳಿಸಲು ತಡವಾಗಿರುವುದಕ್ಕೆ ಕಾರಣಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬಂದಿದೆ.

ಆ) ಗುಂಡ್ಯದಿಂದ ಸುಬ್ರಮಣ್ಯದವರೆಗಿನ ರಸ್ತೆಯು ಒಟ್ಟು 22.00 ಕಿಮೀ ಉದ್ದವಿದ್ದು ಗುಂಡ್ಯ–ಕುಲ್ಕುಂದ ರಸ್ತೆ (ರಾಜ್ಯ ಹೆದ್ದಾರಿ ನಂ.114) 16.00 ಕಿಮೀ (ಗುಂಡ್ಯದಿಂದ ಕೈಕಂಬದವರೆಗೆ) ಹಾಗೂ ಸುಬ್ರಮಣ್ಯ–ಉಡುಪಿ ರಾಜ್ಯ ಹೆದ್ದಾರಿ 37 ಕಿಮೀ 0.00 ರಿಂದ 6.00 (ಸುಬ್ರಹ್ಮಣ್ಯದಿಂದ ಕೈಕಂಬದವರೆಗೆ) ಇರುತ್ತದೆ.

ಗುಂಡ್ಯ–ಕುಲ್ಕುಂದ ಜಿಲ್ಲಾ ಮುಖ್ಯ ರಸ್ತೆಯನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಸರ್ಕಾರವು ಮಾರ್ಚ್ 2006ರಲ್ಲಿ ರಾಜ್ಯ ಹೆದ್ದಾರಿ ಸಂಖ್ಯೆ 114 ಆಗಿ ಮೇಲ್ದರ್ಜೆಗೇರಿಸಿದೆ. ಈ ರಸ್ತೆಯ ಕಿಮೀ. 0.00 ದಿಂದ 4.00 ರವರೆಗೆ 2003–04ನೇ ಸಾಲಿನಲ್ಲಿ ಸಿ.ಆರ್.ಎಫ್. ಯೋಜನೆಯಡಿಯಲ್ಲಿ 5.50 ಮೀ ಅಗಲಕ್ಕೆ (ಮಧ್ಯಂತರ ಪಥ) ಅಭಿವೃದ್ಧಿಪಡಿಸಲಾಗಿದೆ. ಕಿಮೀ 4.00 ರಿಂದ 4.90 ಹಾಗೂ 6.50 ರಿಂದ 16.00 ರವರೆಗೆ ಮಧ್ಯಂತರ ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವಲ್ಲಿ ಈ ರಸ್ತೆಯ ಕಿಮೀ. 4.90 ರಿಂದ 6.50 ರವರೆಗೆ ರೂ. 80.00 ಲಕ್ಷದ ಸಿ.ಆರ್.ಎಫ್.ಯೋಜನೆಯಡಿಯಲ್ಲಿ ಮಂಜೂರುಗೊಂಡಿದ್ದು, ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಇನ್ನುಳಿದ ರಸ್ತೆ ಕಾಮಗಾರಿಯನ್ನು ಅನುದಾನದ ಲಭ್ಯತೆ ಮೇರೆಗೆ ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ವತಿಯಿಂದ ಕೈಗೆತ್ತಿಕೊಳ್ಳಲಾಗುವುದು.

ಇ) ಈ ರಸ್ತೆಯು ಹಾದು ಹೋಗುವ ಪ್ರದೇಶವು ರಕ್ಷಿತ ಅರಣ್ಯ ಪ್ರದೇಶವಾಗಿದ್ದು ನವೆಂಬರ್–ಡಿಸೆಂಬರ್ ತಿಂಗಳವರೆಗೆ ಮಳೆ ಬೀಳುತ್ತಿರುವುದರಿಂದ ರಸ್ತೆಯ ಮೇಲಿನ ತೇವಾಂಶ ಕಡಿಮೆಯಾಗದೆ ಡಾಂಬರು ಕೆಲಸ ಕೈಗೊಳ್ಳುವುದು ಕಷ್ಟಸಾಧ್ಯವಾಗಿರುವುದು. ಅಲ್ಲದೆ ಆ ಪ್ರದೇಶದಲ್ಲಿ ಅಗತ್ಯ ಸುಮಗ್ರಿಗಳ ಲಭ್ಯತೆಯ ಕೊರತೆಯಿಂದಾಗಿ ಕಾಮಗಾರಿಯ ಪ್ರಗತಿಯಲ್ಲಿ ವಿಳಂಬವಾಗಿರುತ್ತದೆ. ಆದಾಗ್ಯೂ ಈ ರಸ್ತೆಯ ಪ್ರಾಮುಖ್ಯತೆಯನ್ನು ಅರಿತು ರಸ್ತೆಯ ಎರಡು ಕಡೆಗಳಿಂದ ಕಾಮಗಾರಿಗಳನ್ನು ಪ್ರಾರಂಭಿಸಿ ಗುಂಡಿಗಳನ್ನು ಮುಚ್ಚುವ ಕಾಮಗಾರಿಯನ್ನು ನಿರ್ವಹಿಸಿ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗಿದೆ.

673(1340) ಶ್ರೀ ಅಂಗಾರ ಎಸ್. (ಸುಳ್ಯ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಪುತ್ತೂರು ಡಿಪೋದಲ್ಲಿ ಹೆಚ್ಚು ಮಾರ್ಗಸೂಚಿಯ ಬಸ್ಸುಗಳು ಸುಳ್ಯಕ್ಕೆ ಸಂಬಂಧಿಸಿದ ಮಾರ್ಗ ಸೂಚಿಯಲ್ಲಿ ಓಡಿಸುತ್ತಿರುವ ಬಸ್ಸುಗಳಾಗಿದ್ದು, ಸುಳ್ಯಕ್ಕೆ ಪ್ರತ್ಯೇಕ ಬಸ್ ಡಿಪೋ ರಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ: